## ಈ ಲೇಖನದ ವಿಷಯಾನುಕ್ರಮಣಿಕೆ


ಸಾಡೇಸಾತಿಯ ಪರಿಹಾರ ಹೇಗೆ? 2

ಸಾಡೇಸಾತ್ ಎಂದರೇನು? 3

ಸಾಡೇಸಾತಿಯನ್ನು ಲೆಕ್ಕ ಹಾಕುವ ಕ್ರಮ 5

ಸಾಡೇಸಾತ್ ನ ದುಷ್ಪರಿಣಾಮಗಳು 8

ಸಾಡೇಸಾತಿಯ ಒಳ್ಳೆಯ ಪರಿಣಾಮಗಳು 11

ಪರಿಹಾರಗಳು 13

ಶನೈಶ್ಚರರನ್ನು ಸರ್ವಥಾ ದೂಷಿಸಬೇಡಿ 14

ಶನೈಶ್ಚರ ಸ್ತೋತ್ರಗಳನ್ನು ಪಠಿಸಿ 16

ಶ್ರೀವಾದಿರಾಜಕೃತ-ಶನಿ-ಸ್ತೋತ್ರ 17

ಜಪ ಹೋಮಗಳು 20

ಕಬ್ಬಿಣದ ದಾನ 22

ಎಳ್ಳು ಎಳ್ಳೆಣ್ಣೆಯ ದಾನ 27

ಎಳ್ಳೆಣ್ಣೆಯ ದೀಪ ಹಚ್ಚಿ 28

ಗೋಗ್ರಾಸ 29

ಗುರುಗಳ ಸೇವೆ, ರಾಯರ ಸೇವೆ 30

ಪ್ರಾಣದೇವರ ಸ್ತೋತ್ರ ಸೇವೆ 31

ನರಸಿಂಹದೇವರ ಸ್ತೋತ್ರ 32

ಎಷ್ಟು ದಿವಸ ಪರಿಹಾರ ಆಚರಿಸಬೇಕು, ಯಾವಾಗ? 34

## ಸಾಡೇಸಾತಿಯ ಪರಿಹಾರ ಹೇಗೆ[1]?

ಪ್ರೀತಿಯ ಗುರುಗಳಿಗೆ ಭಕ್ತಿಯ ನಮಸ್ಕಾರಗಳು. ತಮ್ಮ ವಿಶ್ವನಂದಿನಿಯಿಂದ ನಮ್ಮ ಜೀವನವೇ ಬದಲಾಗುತ್ತಿದೆ. ತಮಗೆ ಎಷ್ಟು ಧನ್ಯವಾದ ಮತ್ತು ನಮಸ್ಕಾರಗಳನ್ನು ಸಲ್ಲಿಸಿದರೂ ಕಡಿಮೆಯೇ.

ಹಿಂದೆಯೂ ಎರಡುಬಾರಿ ತಮ್ಮನ್ನು ಈ ಪ್ರಶ್ನೆ ಕೇಳಿದ್ದೆ. ಸಾಡೇಸಾತಿಯ ಕುರಿತು ಪೂರ್ಣವಾದ ಮಾಹಿತಿಯನ್ನು ನೀಡಬೇಕಾಗಿ ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಅದರ ಪರಿಹಾರವನ್ನು ತಿಳಿಸಿ.

ತಾವು ಯಾವುದೇ ವಿಷಯವನ್ನು ನಿರೂಪಿಸಿದರೂ ನಮ್ಮ ಮನಸ್ಸಿಗೆ ನಾಟುವಂತೆ ತಿಳಿಸುತ್ತೀರಿ. ಅದಕ್ಕಾಗಿ ತಮಗೆ ಮೇಲಿಂದ ಮೇಲೆ ನಮ್ಮ ಪ್ರಶ್ನೆಗಳಿಂದ ತೊಂದರೆ ಕೊಡುತ್ತಿರುತ್ತೇವೆ. ದಯವಿಟ್ಟು ಕ್ಷಮಿಸಿ.

— ರಘೂತ್ತಮರಾವ್ ಮತ್ತು ಕುಟುಂಬದವರು.

---

[1] ಶ್ರೀಯುತ ಅಭಿಷೇಕ್ ರವರೂ ಸಹ ಈ ಪ್ರಶ್ನೆಯನ್ನು ಕೇಳಿದ್ದಾರೆ.

## ಸಾಡೇಸಾತ್ ಎಂದರೇನು?

ಸಾಡೇಸಾತ್ ಎನ್ನುವದು ಹಿಂದಿಯ ಶಬ್ದ. ಏಳೂವರೆ ಎಂದರ್ಥ.

ಶನಿಗ್ರಹ ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೋಗಲು ತೆಗೆದುಕೊಳ್ಳುವ ಸಮಯ ಸಾಮಾನ್ಯವಾಗಿ ಎರಡೂವರೆ ವರ್ಷಗಳು.

ಮೂರು ರಾಶಿಗಳನ್ನು ದಾಟಲು ಏಳೂವರೆ ವರ್ಷಗಳು ಬೇಕು.

ಯಾವ ರಾಶಿಯಲ್ಲಿ ನಮ್ಮ ಜನ್ಮವಾಗಿದೆಯೋ ಆ ರಾಶಿ, ಅದರ ಹಿಂದಿನ ಮತ್ತು ಮುಂದಿನ ರಾಶಿಗಳು, ಈ ಮೂರು ರಾಶಿಗಳಲ್ಲಿ ಶನೈಶ್ಚರ ಇದ್ದಾಗ ಮನುಷ್ಯ ವಿಧವಿಧವಾದ ರೀತಿಯಲ್ಲಿ ದುಃಖ ಕಷ್ಟಗಳನ್ನು ಅನುಭವಿಸುತ್ತಾನೆ.

ಹೀಗಾಗಿ ಈ ಮೂರು ರಾಶಿಗಳನ್ನು ಸಂಚರಿಸಲು ತೆಗೆದುಕೊಳ್ಳುವ ಕಾಲ ಸಾಡೇಸಾತ್, ಅಥವಾ

ಸಾಡೇಸಾತಿ ಎಂದು ಜನರ ಮಧ್ಯದಲ್ಲಿ ವ್ಯವಹಾರವಿದೆ.

ಇದು ಹಿಂದಿ ಮಾತನಾಡುವ ಜನರಿಂದ ಉಂಟಾಗಿರುವ ಪ್ರಭಾವ. ಶಾಸ್ತ್ರೀಯವಾದ ಹೆಸರಲ್ಲ ಇದು.

ಮತ್ತು ಜ್ಯೋತಿಃಶಾಸ್ತ್ರದಲ್ಲಿ ಈ ಮೂರೂ ಮನೆಗಳ ಸಂಚಾರವನ್ನು ಒಟ್ಟಿಗೇ ಪರಿಗಣಿಸಿ ಹೆಸರನ್ನು ನೀಡಿದ್ದು ನಮಗೆ ಕಂಡಿಲ್ಲ.

ದ್ವಾದಶ-ಜನ್ಮ-ದ್ವಿತೀಯರಾಶಿಗಳಲ್ಲಿ ಸಂಚರಿಸುವಾಗಿನ ಫಲಗಳನ್ನು ಪ್ರತ್ಯೇಕವಾಗಿಯೇ ಹೇಳಿದ್ದಾರೆ.

ನಮ್ಮ ಅನುಕೂಲಕ್ಕೆ ಸಾಡೇಸಾತ್ ಅಥವಾ ಸಾಡೇಸಾತಿ ಎಂದು ವ್ಯವಹರಿಸಲು ತಪ್ಪಿಲ್ಲ.

## ಸಾಡೇಸಾತಿಯನ್ನು ಲೆಕ್ಕ ಹಾಕುವ ಕ್ರಮ

ರಾಶಿಗಳು ಹನ್ನೆರಡು —

1. ಮೇಷ
2. ವೃಷಭ
3. ಮಿಥುನ
4. ಕರ್ಕ
5. ಸಿಂಹ
6. ಕನ್ಯಾ
7. ತುಲಾ
8. ವೃಶ್ಚಿಕ
9. ಧನು
10. ಮಕರ
11. ಕುಂಭ
12. ಮೀನ

ನಾವು ಯಾವ ರಾಶಿಯಲ್ಲಿ ಹುಟ್ಟಿದ್ದೇವೆಯೋ ಅದು ಜನ್ಮರಾಶಿ.

ಜನ್ಮರಾಶಿಯ ಹಿಂದಿನ ರಾಶಿ ದ್ವಾದಶ ರಾಶಿ. ಜನ್ಮರಾಶಿಯ ಮುಂದಿನ ರಾಶಿ ದ್ವಿತೀಯ ರಾಶಿ

ದ್ವಾದಶಭಾವಕ್ಕೆ (ಭಾವ, ರಾಶಿ ಎರಡೂ ಒಂದೇ ಅರ್ಥವನ್ನು ನೀಡುತ್ತವೆ) ಶನಿ ಬಂದಾಗ ಸಾಡೇಸಾತ್ ಆರಂಭವಾಗುತ್ತದೆ. ಅದರ ಮೊದಲ ಎರಡೂವರೆ ವರ್ಷಗಳು.

ಜನ್ಮರಾಶಿಗೆ ಶನಿ ಬಂದಾಗ ಸಾಡೇಸಾತ್ ನ ಮಧ್ಯದ ಎರಡೂ ವರ್ಷಗಳು.

ದ್ವಿತೀಯರಾಶಿಗೆ ಬಂದಾಗ ಸಾಡೇಸಾತ್ ನ ಮೂರನೆಯ ಭಾಗ. ಕೊನೆಯ ಎರಡೂವರೆ ವರ್ಷಗಳು.

ಮೇಷರಾಶಿಯಲ್ಲಿ ಹುಟ್ಟಿದ್ದರೆ ಮೇಷ ಜನ್ಮರಾಶಿ. ಮೀನ ದ್ವಾದಶ, ವೃಷಭ ದ್ವಿತೀಯ.

ಹಾಗೆ ಸಿಂಹರಾಶಿಯಲ್ಲಿ ಹುಟ್ಟಿದ್ದರೆ ಕರ್ಕ ದ್ವಾದಶ. ಕನ್ಯಾ ದ್ವಿತೀಯ.

ಮೀನರಾಶಿಯಲ್ಲಿ ಹುಟ್ಟಿದ್ದರೆ ಕುಂಭ ದ್ವಾದಶ. ಮೇಷ ದ್ವಿತೀಯ.

ಅಂದರೆ ಮೀನರಾಶಿಯವರಿಗೆ ಕುಂಭಕ್ಕೆ ಶನಿ ಬಂದಾಗ ಸಾಡೇಸಾತ್ ಆರಂಭ, ಮೇಷವನ್ನು ಬಿಟ್ಟಾಗ ಸಾಡೇಸಾತ್ ಮುಗಿಯುತ್ತದೆ.

ಈಗ ಸಾಡೇಸಾತಿಯ ಪರಿಣಾಮಗಳ ಕುರಿತು ತಿಳಿಸುತ್ತೇನೆ. ಗಾಬರಿಯಾಗುವದು ಬೇಡ. ಜ್ಯೋತಿಷಿಯ ಅತ್ಯಂತ ಮುಖ್ಯವಾದ ಕರ್ತವ್ಯವೆಂದರೆ ಪರಿಹಾರವಿರುವ ಸಮಸ್ಯೆಯನ್ನು ಮಾತ್ರ ಜನರಿಗೆ ತಿಳಿಸಬೇಕು. ಪರಿಹಾರವಾಗದ ಸಮಸ್ಯೆಯನ್ನು ತಿಳಿಸುವದೇ ಇಲ್ಲ. ಜಾತಕ ನೋಡಿದ ತಕ್ಷಣ, ಇದು ಪರಿಹಾರವಾಗುವ ಅಥವಾ ಪರಿಹಾರವಾಗದ ಸಮಸ್ಯೆ ಎಂದು ಉತ್ತಮ ಜ್ಯೋತಿಷಿಗೆ ಅರ್ಥವಾಗಿಬಿಡುತ್ತದೆ.

ಸಾಡೇಸಾತಿಯ ಪರಿಣಾಮಗಳು ಅತ್ಯಂತ ಘೋರ ನಿಜ. ಆದರೆ, ಮೊದಲೇ ಪರಿಹಾರ ಮಾಡಿಕೊಂಡರೆ ಸರ್ವಥಾ ಅವು ಘೋರ ಪರಿಣಾಮವನ್ನು ಬೀರುವದಿಲ್ಲ. ಮೊದಲಿಗೆ ಸಮಸ್ಯೆಗಳನ್ನೂ ತಿಳಿಸಿ ಆ ನಂತರ ಪರಿಹಾರವನ್ನೂ ತಿಳಿಸುತ್ತೇನೆ.

## ಸಾಡೇಸಾತ್ ನ ದುಷ್ಪರಿಣಾಮಗಳು

ಸಾಡೇ ಸಾತ್ ನೀಡುವ ದುಃಖ ಅನುಭವಿಸಿದವರಿಗೇ ಗೊತ್ತು. ಪ್ರಾಯಃ ಮನುಷ್ಯ ಅನುಭವಿಸುವ ಏನು ಮರಣಯಾತನೆಯಿದೆ, ಅದು ನಾವೆಲ್ಲರೂ ಅನುಭವಿಸುವ ಯಾತನೆಗಳಲ್ಲಯೇ ಅತ್ಯಧಿಕವಾದದ್ದು. ಆ ಯಾತನೆಯ ನಂತರದ ಸ್ಥಾನ ಸಾಡೇಸಾತಿಯಲ್ಲಿ ಅನುಭವಿಸುವ ಯಾತನೆಗಳದ್ದೇ ಆಗಿರುತ್ತದೆ.

ಕಾರಣ, ಈ ಸಂದರ್ಭದಲ್ಲಿ ದೇಹ, ಮನಸ್ಸು ಎರಡರ ಮೇಲೂ ಪರಿಣಾಮವುಂಟಾಗುತ್ತದೆ. ಮನಸ್ಸು ಅತ್ಯಂತ ದುರ್ಬಲವಾಗುತ್ತದೆ. ಮೇಲಿಂದ ಮೇಲೆ ಸಾಯುವ ಆಲೋಚನೆ ಬರುತ್ತದೆ. ಸಣ್ಣಪುಟ್ಟ ಕಷ್ಟವೂ ಬೆಟ್ಟದಂತೆ ನಿಂತುಬಿಡುತ್ತದೆ.

ಹಾಗೆ ದೇಹದ ಮೇಲೂ ವಿಪರೀತ ಪರಿಣಾಮವುಂಟಾಗುತ್ತದೆ. ಭಯಂಕರ ಅಪಘಾತಗಳು, ದೇಹದ ಅಂಗಗಳ ಊನತೆ ಇವೇ ಮೊದಲಾದವು ಆಗುವ ಸಾಧ್ಯತೆ ಇರುತ್ತದೆ.

ನಮ್ಮ ಬಳಿ ಅದೆಷ್ಟೇ ಹಣ ಇರಲಿ, ಅಧಿಕಾರವಿರಲಿ, ಪ್ರತಿಷ್ಠೆಯಿರಲಿ, ಸಮಾಜದಲ್ಲಿ ಪ್ರಭಾವಿಗಳ ಪರಿಚಯವಿರಲಿ ಯಾವುದೂ ನಮ್ಮ ಉಪಯೋಗಕ್ಕೆ ಬಾರದಂತಾಗುತ್ತದೆ. ಅವೆಲ್ಲವನ್ನೂ ಉಪಯೋಗಿಸಿದರೂ ಫಲ ದೊರೆಯುವದಿಲ್ಲ. ಮನಸ್ಸಿಗೆ ನೆಮ್ಮದಿ ಇರುವದಿಲ್ಲ.

ಕುಟುಂಬದಿಂದ ದೂರಾಗುತ್ತೇವೆ. ಬಂಧುಗಳು ಮೋರೆಯನ್ನು ಸಹ ತೋರಿಸುವದಿಲ್ಲ. ಮಿತ್ರರೇ ಶತ್ರುಗಳಾಗುತ್ತಾರೆ. ಸಂಬಂಧವಿಲ್ಲದವರೂ ತೊಂದರೆ ಕೊಡುತ್ತಾರೆ. ಕೆಲಸ ಕಾರ್ಯಗಳಾಗುವದಿಲ್ಲ. ಅಲೆದಾಟದಲ್ಲಿಯೇ ದೇಹದ ಶಕ್ತಿ, ಹಣ ಖರ್ಚಾಗುತ್ತದೆ. ಕೆಲಸಗಳಾಗುವದಿಲ್ಲ.

ಸಾಡೇಸಾತಿ ನೀಡುವ,  ಅತ್ಯಂತ ನೋವಿನ ಕಷ್ಟವೆಂದರೆ ಅವಮಾನಗಳು. ನಮ್ಮವರೇ ನಮ್ಮನ್ನು ಹೀಯಾಳಿಸುತ್ತಾರೆ. ತುಂಬ ಹತ್ತಿರದವರ ಮನೆಗೇ ಊಟಕ್ಕೆ ಹೋಗಿರುತ್ತೇವೆ. ಅನ್ನ ತಿನ್ನಬೇಕಾದರೆ, ನಮ್ಮ ಕಿವಿಗೆ ಕೇಳಲಿ ಎಂದೇ ನಮ್ಮನ್ನು

ಆಡಿಕೊಳ್ಳುತ್ತಾರೆ. ತಿನ್ನುವ ಅನ್ನದಲ್ಲಿ ಕಣ್ಣೀರು ಬೆರೆತು ಬಿಡುತ್ತದೆ.

ಕೋರ್ಟು ಕಛೇರಿಗಳಿಗೆ ವೃಥಾ ಅಲೆದಾಟ. ಎಲ್ಲೆಡೆಯೂ ಸೋಲು, ಕಾರ್ಯಗಳಾಗುವದಿಲ್ಲ.

ನಾವು ಮಾಡದೇ ಇರುವ ತಪ್ಪನ್ನು ಜನರು ತಪ್ಪು ಎನ್ನುತ್ತಾರೆ. ನಾವು ಆಡದೇ ಇರುವ ಮಾತನ್ನು ಆಡಿದ್ದಾರೆ ಎಂದು ವಾದಿಸುತ್ತಾರೆ. ವಿನಾಕಾರಣ ದೂಷಿಸುತ್ತಾರೆ. ಕಣ್ಣೀರಿನಲ್ಲಿ ಕೈ ತೊಳೆಯುವಷ್ಟು ಹಿಂಸೆ ಉಂಟಾಗಿಬಿಡುತ್ತದೆ.

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸಾಡೇಸಾತಿಯಲ್ಲಿ ಮನುಷ್ಯ ಬೀದಿಗೆ ಬಂದು ನಿಲ್ಲುತ್ತಾನೆ.

ಇನ್ನು ಹೆಣ್ಣುಮಕ್ಕಳ ಪರಿಸ್ಥಿತಿಯಂತೂ ಮತ್ತಷ್ಟು ಘೋರವಾಗುತ್ತದೆ. ಗಂಡ, ಅತ್ತೆ, ಮಾವ, ತಂದೆ, ತಾಯಿ, ಅಕ್ಕ, ತಂಗಿ, ಅಣ್ಣ, ತಮ್ಮ, ಮಕ್ಕಳು ಮುಂತಾಗಿ ಎಲ್ಲ ಬಂಧುಗಳಿಂದಲೇ ಮಾನಸಿಕ ದೈಹಿಕ ಹಿಂಸೆಗಳನ್ನು ಆ ಹೆಣ್ಣು ಅನುಭವಿಸುತ್ತಾಳೆ.

## ಸಾಡೇಸಾತಿಯ ಒಳ್ಳೆಯ ಪರಿಣಾಮಗಳು

ಹಾಗಾದರೆ ಸಾಡೇಸಾತ್ ಅತ್ಯಂತ ದುಷ್ಟವಾದದ್ದು ಮಾತ್ರ ಎಂದು ನೀವು ಎಣಿಸಿದ್ದರೆ ತಪ್ಪು.

ಸಾಡೇಸಾತ್ ಎಷ್ಟು ಕೆಟ್ಟದ್ದನ್ನು ಮಾಡುತ್ತದೆಯೋ ಅಷ್ಟೇ ಅದ್ಭುತವಾಗಿ ಒಳ್ಳೆಯದನ್ನು ಉಂಟು ಮಾಡುತ್ತದೆ.

ಕಾರಣ, ಶನ್ನೈಶ್ಚರರು ಎಷ್ಟು ಕಠಿಣ ದೇವತೆಯೋ ಅಷ್ಟೇ ಕರುಣಾಳು ದೇವತೆ.

ತಾನು ಕೊಟ್ಟ ಕಷ್ಟವನ್ನು ಮರೆಸುವಂತೆ, ಹಣ, ಕೀರ್ತಿ, ಆರೋಗ್ಯ ಎಲ್ಲವನ್ನೂ ನೀಡುವ ದೇವತೆ ಶನ್ನೈಶ್ಚರರು.

ಸಾಡೇಸಾತಿಯ  ಒಳ್ಳೆಯ ಪರಿಣಾಮಗಳು ಎರಡು ರೀತಿಯಾಗಿರುತ್ತವೆ.

ಏಳೂವರೆ ವರ್ಷದ ಸಾಡೇಸಾತಿಯನ್ನು ಎರಡು ಭಾಗ ಮಾಡಿ. ಹನ್ನೆರಡನೆಯ ಮನೆ ಮತ್ತು ಮೊದಲನೆಯ ಮನೆಯಲ್ಲಿ ಶನ್ನೈಶ್ಚರರು

ಇರುವವರೆಗೆ ಒಂದು ಭಾಗ, ಅಂದರೆ ಐದು ವರ್ಷಗಳು.

ಎರಡನೆಯ ಮನೆಯಲ್ಲಿ ಇರುವವರೆಗೆ ಒಂದು ಭಾಗ, ಅಂದರೆ ಕಡೆಯ ಎರಡೂವರೆ ವರ್ಷಗಳು.

ಸಾಡೇಸಾತಿಯ ಆರಂಭದಲ್ಲಿ ಒಳ್ಳೆಯ ಪರಿಣಾಮ ಉಂಟಾದರೆ ನೀವು ಅತ್ಯಂತ ಜಾಗರೂಕರಾಗಿರಬೇಕು. ಕಾರಣ ಕಡೆಯಲ್ಲಿ ಮೇಲೆ ಹೇಳಿದ ಅತೀವ ಕಷ್ಟಗಳನ್ನು ನೀಡಿ ಶನೈಶ್ಚರರು ಹೊರಟು ಬಿಡುತ್ತಾರೆ. ಆ ಕಷ್ಟಗಳು ಪರಿಹಾರವಾಗಲು ಮತ್ತೆ ಶನೈಶ್ಚರ ಆ ಎರಡನೆಯ ಮನೆಗೆ ಬರಬೇಕು. ಅಂದರೆ ಬರೋಬ್ಬರಿ ಇಪ್ಪತ್ತೇಳುವರೆ ವರ್ಷಗಳ ಕಾಲ ನರಕ ಯಾತನೆಯನ್ನು ಅನುಭವಿಸಬೇಕಾಗುತ್ತದೆ, ಮುಟ್ಟಿದ್ದೆಲ್ಲ ಮಣ್ಣಾಗುತ್ತದೆ.

ಸಾಡೇಸಾತಿಯ ಆರಂಭದಲ್ಲಿ ಅತೀವ ಕಷ್ಟವುಂಟಾಗಿ ಅಂತ್ಯದಲ್ಲಿ ಒಳ್ಳೆಯದಾದರೆ ನೀವು ಭಾಗ್ಯವಂತರು. ಕಾರಣ, ತಡೆಯಲಾಗದಷ್ಟು ಕಷ್ಟವನ್ನು ನೀಡಿದ ಶನೈಶ್ಚರ ಹೋಗುವಾಗ

ಬದುಕಿಗೆ ಭರ್ತಿಯಾಗುವಷ್ಟು ಸೌಖ್ಯವನ್ನು ನೀಡಿ ಹೋಗಿಬಿಡುತ್ತಾರೆ. ಜೀವನ ಸುಖಮಯವಾಗುತ್ತದೆ.

ಈ ಪರಿಸ್ಥಿತಿಯಲ್ಲಿ ಸಾಮಾನ್ಯವಾಗಿ ಮೊದಲ ಐದು ವರ್ಷಗಳು ಕಷ್ಟವಿರುತ್ತದೆ. ಮೂರು ನಾಲ್ಕನೆಯ ವರ್ಷದಲ್ಲಿ ಕಷ್ಟ ತುತ್ತತುದಿಯನ್ನು ಮುಟ್ಟುತ್ತದೆ. ಐದನೆಯ ವರ್ಷ ಆರಂಭವಾಗುತ್ತಿದ್ದಂತೆ ಸುಖದ ಅರುಣೋದಯ ಆರಂಭವಾಗುತ್ತದೆ. ಸಾಡೇಸಾತಿ ಮುಗಿಯುವಷ್ಟರಲ್ಲಿ ಕಷ್ಟಗಳೆಲ್ಲ ಪರಿಹಾರವಾಗಿ ಉತ್ತಮ ಸೌಖ್ಯದ ಜೀವನ ನಮ್ಮದಾಗಿರುತ್ತದೆ.

## ಪರಿಹಾರಗಳು

ಈ ಸಾಡೇಸಾತಿಯ ದುಷ್ಟಪರಿಣಾಮಗಳನ್ನು ಪರಿಹಾರ ಮಾಡಿಕೊಳ್ಳುವದು ಹೇಗೆ ಎನ್ನುವದನ್ನು ವಿಸ್ತಾರವಾಗಿ ತಿಳಿಯೋಣ. ಒಂದೊಂದಾಗಿ ವಿವರಿಸುತ್ತ ಹೋಗುತ್ತೇನೆ. ನಿಧಾನವಾಗಿ ಓದುತ್ತ ಹೋಗಿ. ಪರಿಹಾರದ ಯಾವ ಮಾರ್ಗ ನಿಮಗೆ ಅನುಕೂಲವೋ ಆ ಮಾರ್ಗವನ್ನು ಅನುಸರಿಸಿ.

## ಶನೈಶ್ಚರರನ್ನು ಸರ್ವಥಾ ದೂಷಿಸಬೇಡಿ

ಮೊಟ್ಟ ಮೊದಲಿಗೆ ನೀವು ಮಾಡಬೇಕಾದ ಕಾರ್ಯ ಶನೈಶ್ಚರರ ನಿಂದೆಯ ತ್ಯಾಗ. ಈ ದಿವಸಗಳಲ್ಲಿ "ಶನಿ" ಎನ್ನುವದು ಗೂಬೆ, ನಾಯಿ, ಅಯೋಗ್ಯ ಎಂಬಂತೆ ಬೈಗುಳಕ್ಕಾಗಿ ಉಪಯೋಗಿಸಲ್ಪಡುತ್ತದೆ.

ನೀವೇನಾದರೂ ಆ ರೀತಿಯಾಗಿ ಮತ್ತೊಬ್ಬರನ್ನು ಶನಿ ಎಂದು ಬೈದಿದ್ದರೆ ಭಗವಂತನ ನಿಗ್ರಹ ಸರ್ವಥಾ ತಪ್ಪಿದ್ದಲ್ಲ.

ಕಾರಣ, ಶನೈಶ್ಚರರು ಭಗವಂತನ ದಿವ್ಯಪ್ರತಿಮೆ. ಪರಮಾತ್ಮನ ಕೃಷ್ಣಾವತಾರದಲ್ಲಿ ಅವನ ಮಡದಿಯರಾಗಿ ಹುಟ್ಟಲು, ಹೆಣ್ತನವನ್ನು ಪಡೆಯಲು ತಪಸ್ಸು ಮಾಡಿದ ಏನು 16000 ಜನ ಅಗ್ನಿಪುತ್ರರಿದ್ದಾರೆ ಅವರ ಯೋಗ್ಯತೆಗಿಂತಲೂ ಅಧಿಕ ಯೋಗ್ಯತೆಯ ದೇವತೆ, ಶನೈಶ್ಚರರು. ನಾವಿರುವ ಸಮಗ್ರ ಭೂಮಿ ಆ ಶನೈಶ್ಚರ ದೇವತೆಯ ಅಧೀನ. "ಪೃಥಿವ್ಯಾತ್ಮಾ ಶನಿಃ" ಎಂದು ಶ್ರೀಮದಾಚಾರ್ಯರು ನಿರ್ಣಯಿಸಿದ್ದಾರೆ.

ಭಗವಂತ ಒಬ್ಬೊಬ್ಬರಿಗೆ ಒಂದೊಂದು ಕಾರ್ಯವನ್ನು ಅನುಗ್ರಹಿಸಿದ್ದಾನೆ. ರುದ್ರದೇವರಿಗೆ ಸರ್ವಸಂಹಾರದ ಕಾರ್ಯವನ್ನು ಅನುಗ್ರಹಿಸಿದಂತೆ, ಯಮಧರ್ಮದೇವರಿಗೆ ಜೀವರ ದುಷ್ಟಕರ್ಮಗಳಿಗೆ ನರಕದಲ್ಲಿ ಶಿಕ್ಷೆಯನ್ನು ನೀಡುವ ಕರ್ತವ್ಯವನ್ನು ಅನುಗ್ರಹಿಸಿದಂತೆ, ನರಕದಲ್ಲಿ ಅನುಭವಿಸುವಷ್ಟು ತೀವ್ರವಲ್ಲದ ದುಷ್ಕರ್ಮಗಳಿಗೆ ಫಲವನ್ನು ನೀಡುವ ಕಾರ್ಯವನ್ನು ಶನೈಶ್ಚರರಿಗೆ ಅನುಗ್ರಹಿಸಿದ್ದಾನೆ.

ಈ ಮೊದಲು ಆ ರೀತಿಯಾಗಿ ಶನೈಶ್ಚರರನ್ನು ನಿಂದಿಸಿದ್ದರೆ ಮೊದಲಿಗೆ ದೇವರಿಗೆ ನಮಸ್ಕಾರವನ್ನು ಮಾಡಿ ಆ ಅಪರಾಧಕ್ಕೆ ಕ್ಷಮೆಯನ್ನು ಯಾಚಿಸಿ.

**ಸಾಡೇಸಾತ್ ನಲ್ಲಿ ನಾವು ಅನುಭವಿಸುವ ಕಷ್ಟಗಳೆಲ್ಲ ನಾವೇ ಮಾಡಿದ ಪಾಪಕರ್ಮಗಳ ಫಲ ಎನ್ನುವದನ್ನು ಮರೆಯತಕ್ಕದ್ದಲ್ಲ. ನಮ್ಮ ಕಷ್ಟಕ್ಕೆ ಶನೈಶ್ಚರ ಕಾರಣರಲ್ಲ, ನಾವೇ ಕಾರಣ. ನಮ್ಮ ಕರ್ಮಕ್ಕೆ ಫಲವನ್ನು ನೀಡುತ್ತಿರುವ ದೇವತೆಯಷ್ಟೇ ಶನೈಶ್ಚರ. ಯಮಧರ್ಮರಾಜರಂತೆ.**

## ಶನೈಶ್ಚರ ಸ್ತೋತ್ರಗಳನ್ನು ಪಠಿಸಿ

ಶಾಸ್ತ್ರಗಳಿಂದ ಶನೈಶ್ಚರರ ಮಾಹಾತ್ಮ್ಯವನ್ನು ತಿಳಿದು ಅವರನ್ನು ಭಕ್ತಿಯಿಂದ ಸ್ಮರಣೆ ಮಾಡಿ.

ಶನೈಶ್ಚರರ ಕುರಿತ ಸ್ತೋತ್ರಗಳನ್ನು ಭಕ್ತಿಯಿಂದ ಪಠಿಸಲು ಆರಂಭಿಸಿ.

ನಮ್ಮ ಕಷ್ಟ ನಮ್ಮ ನೋವು ನಮಗೇ ತಿಳಿದಿರುತ್ತದೆ. ಮತ್ತೊಬ್ಬರಿಗೆ ಅದನ್ನು ಹೇಳಲು ಸಾಧ್ಯವೂ ಇರುವದಿಲ್ಲ.

ಹೀಗಾಗಿ ನಮ್ಮ ಕಷ್ಟವನ್ನು ಪರಿಹರಿಸಿಕೊಳ್ಳಲು ನಾವೇ ಪ್ರಾರ್ಥನೆ ಸಲ್ಲಿಸಬೇಕು. ಮತ್ತೊಬ್ಬ ಪುರೋಹಿತರಿಗೆ, ಜಪ ಮಾಡಲು ಹೇಳುವದು ಅನಿವಾರ್ಯ ಸಂದರ್ಭದಲ್ಲಷ್ಟೇ.

ನಾವೇ ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸಬೇಕು, ನಾವೇ ದೇವರ ಮುಂದೆ ಮಣಿದು ನಮಸ್ಕರಿಸಬೇಕು, ಆಗ ಮಾತ್ರ ಕ್ಷಿಪ್ರವಾದ ಫಲ ದೊರೆಯಲು ಸಾಧ್ಯ.

## ಶ್ರೀವಾದಿರಾಜಕೃತ-ಶನಿ-ಸ್ತೋತ್ರ

ಭಕ್ತಜನರನ್ನು ಉದ್ಧಾರಮಾಡಲೆಂದೇ ಅವತರಿಸಿ ಬಂದ ಪರಮಮಂಗಳರಾದ ಶ್ರೀಮದ್ವಾದಿರಾಜಗುರುಸಾರ್ವಭೌಮರು, ಶನೈಶ್ಚರರನ್ನು ಯಾವ ರೀತಿ ಸ್ತೋತ್ರಮಾಡಬೇಕು ಎನ್ನುವದನ್ನು ತಿಳಿಸಿಕೊಟ್ಟಿದ್ದಾರೆ. ಆ ಮಹಾನುಭಾವರು ರಚಿಸಿದ ಸ್ತೋತ್ರ ಸರ್ವಸಿದ್ಧಿಪ್ರದ ಎನ್ನುವದು ಇಡಿಯ ಮಾಧ್ವಸಮಾಜದ ಅನುಭವಕ್ಕೆ ಬಂದಿರುವ ವಿಷಯ.

**ಶನೇ ದಿನಮಣೇಃ ಸೂನೋ**
**ಹ್ಯನೇಕಗುಣಸನ್ಮಣೇ ।**
**ಅರಿಷ್ಟಂ ಹರ ಮೇಭೀಷ್ಟಂ**
**ಕುರು ಮಾ ಕುರು ಸಂಕಟಮ್ ।।**

ಎಂಬ ಸ್ತೋತ್ರವನ್ನು ಪ್ರತೀನಿತ್ಯ ಬೆಳಿಗ್ಗೆ ಸಂಜೆಗಳಲ್ಲಿ ಶುಚಿಯಾಗಿ ದೇವರ ಮನೆಯಲ್ಲಿ ಕುಳಿತು ಪಠಿಸಿ[2].

---

[2] ವಿಶ್ವನಂದಿನಿಯಲ್ಲಿ "ಸ್ತೋತ್ರಗಳ ಪಠಣ" ಎಂಬ Folder ನಲ್ಲಿ ನವಗ್ರಹಸ್ತೋತ್ರ ಎಂಬಲ್ಲಿ ಈ ಶ್ಲೋಕದ ಪಠಣ ಪ್ರಕಟವಾಗಿದೆ. VNU401

**ದಿನಮಣೇಃ** = ಸೂರ್ಯದೇವರ

**ಸೂನೋ** = ಪುತ್ರರಾದ

**ಅನೇಕಗುಣಸನ್ಮಣೇ** = ಭಕ್ತಿ, ಜ್ಞಾನ, ವೈರಾಗ್ಯ, ಕಾರುಣ್ಯ, ಪರಾಕ್ರಮ, ಔದಾರ್ಯಮುಂತಾದ ಅನೇಕಗುಣಗಳುಳ್ಳ ನಿರ್ದೋಷರತ್ನದಂತಿರುವ,

**ಹಿ** = ಈ ರೀತಿಯಾಗಿ ಶಾಸ್ತ್ರಗಳಲ್ಲಿ ಪ್ರಖ್ಯಾತರಾದ

**ಶನೇ** = ಹೇ ಶನೈಶ್ಚರರೇ

**ಮೇ** = ನನ್ನ
**ಅರಿಷ್ಟಂ** = ಕಷ್ಟ, ಉಪದ್ರವಗಳನ್ನು
**ಹರ** = ನೀಗಿಸಿ.

**ಅಭೀಷ್ಟಮ್** = ಇಷ್ಟಾರ್ಥವನ್ನು
**ಕುರು** = ದಯಪಾಲಿಸಿ

**ಸಂಕಟಮ್** = ನೋವನ್ನು
**ಮಾ ಕುರು** = ಉಂಟು ಮಾಡಬೇಡಿ.

**ಶ್ರೀ ಶನೈಶ್ಚರಾಯ ನಮಃ** ಎಂಬ ಮಂತ್ರವನ್ನು ಅಥವಾ

**ಶ್ರೀ ಶನೈಶ್ಚರಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಲಕ್ಷ್ಮೀನೃಸಿಂಹಾಯ ನಮಃ**

ಎಂಬ ಮಂತ್ರವನ್ನು ಕುಳಿತಾಗ ನಿಂತಾಗ ( ಈ ಸಂದರ್ಭಗಳಲ್ಲಿ ಓಂಕಾರವನ್ನು ಸರ್ವಥಾ ಹೇಳಬಾರದು) ಭಕ್ತಿಯಿಂದ ಪಠಿಸಿ.

ಇವೆರಡನ್ನೂ ಪ್ರಯಾಣ ಕಾಲದಲ್ಲಿಯೂ ಪಠಿಸಬಹುದು. ಆದರೆ, ಮಲಮೂತ್ರ ವಿಸರ್ಜನೆ ಮಾಡಿ ಕೈಕಾಲು ತೊಳೆಯದಿದ್ದರೆ, ಮೈಲಿಗೆಯ ಸಂಪರ್ಕವಾಗಿದ್ದರೆ ಪಠಿಸತಕ್ಕದ್ದಲ್ಲ.

## ಜಪ ಹೋಮಗಳು

ಸಾಡೇಸಾತಿಯ ಪ್ರಭಾವ ಎಷ್ಟು ತೀವ್ರವಾಗಿರುತ್ತದೆಯೆಂದರೆ ಕೆಲವು ಬಾರಿ ಈ ಶ್ಲೋಕ-ಮಂತ್ರಗಳನ್ನು ಪಠಿಸುವಷ್ಟು ಸಮಯವಿರುವದಿಲ್ಲ, ಆಸಕ್ತಿ ಇರುವದಿಲ್ಲ, ಬುದ್ಧಿ ದೊರೆಯುವದಿಲ್ಲ.

ಅಂತಹ ಸಂದರ್ಭಗಳಲ್ಲಿ, ಅಥವಾ ನಮ್ಮವರಿಗೆ ಸಾಡೇಸಾತಿಯಿಂದ ತೀವ್ರ ತೊಂದರೆಯಾದ ಸಂದರ್ಭದಲ್ಲಿ ಅವರಿಗಾಗಿ ಮತ್ತೊಬ್ಬರು ಜಪ ಮಾಡಬಹುದು.

ಮತ್ತೊಬ್ಬರಿಗಾಗಿ ನೀವೇ ಮಾಡಿ. ಸಾಧ್ಯವಿಲ್ಲದಿದ್ದರೆ, ಒಬ್ಬ ವಿಷ್ಣುಭಕ್ತರಾದ ಸದಾಚಾರಿಗಳಾದ, ನೀವು ನೀಡುವ ದಕ್ಷಿಣೆಗೆ ಆಸೆಪಟ್ಟು ಕಾರ್ಯ ಮಾಡದ ಉತ್ತಮ ಬ್ರಾಹ್ಮಣರನ್ನು ಆರಿಸಿಕೊಳ್ಳಿ.

ಅವರಿಗೆ ಶನಿಯ ಮಂತ್ರವನ್ನು ನಿತ್ಯ ಪಠಿಸಲು ಪ್ರಾರ್ಥಿಸಿ ಮತ್ತು ಶನಿಶಾಂತಿಯ ಹೋಮವನ್ನು ಸಾಧ್ಯವಾದರೆ ಮನೆಯಲ್ಲಿ ಇಲ್ಲವಾದರೆ ಮಠ ದೇವಸ್ಥಾನಗಳಲ್ಲಿ ಆಚರಿಸಿ.

ಹೋಮಗಳ ಕುರಿತು ನಮಗಿರಬೇಕಾದ ಎಚ್ಚರಗಳನ್ನು ಮತ್ತೊಮ್ಮೆ ತಿಳಿಸುತ್ತೇನೆ.

ಇವತ್ತಿಗೆ ಹೋಮದ ಕುಂಡಗಳಿಂದ ಆರಂಭಿಸಿ ಹೋಮದಲ್ಲಿ ಬಳಸುವ ಎಲ್ಲ ದ್ರವ್ಯಗಳವರೆಗೆ ಪ್ರತಿಯೊಂದೂ ಕಲುಷಿತವಾದದ್ದು. ಅವುಗಳಿಂದ ಹೋಮ ಮಾಡಿದರೆ ಸರ್ವಥಾ ಒಳ್ಳೆಯ ಪರಿಣಾಮ ಉಂಟಾಗುವದಿಲ್ಲ, ಹೊರತಾಗಿ ದುಷ್ಟ ಪರಿಣಾಮಗಳೇ ಉಂಟಾಗುತ್ತವೆ.

ಹೀಗಾಗಿ, ಮತ್ತೆ ನೀವು ಮಾಡಬೇಕಾದ ಕಾರ್ಯ, ಉತ್ತಮ ರೀತಿಯಲ್ಲಿ ಹೋಮ ಮಾಡಿಸುವ ಸದಾಚಾರಿಗಳಾದ, ಧರ್ಮಭೀರುಗಳಾದ[3], ಪುರೋಹಿತರನ್ನು  ಆರಿಸಿಕೊಂಡು ಅವರಿಂದ ಶಾಂತಿಯನ್ನು ಆಚರಿಸತಕ್ಕದ್ದು.

ಇದು ಸಾಧ್ಯವಿಲ್ಲದೇ ಹೋದಲ್ಲಿ ಹೋಮದ ಪರಿಶುದ್ಧ ದ್ರವ್ಯಗಳನ್ನು ಉತ್ತಮರಿಗೆ ದಾನ ಮಾಡಿ.

---

[3] ಧರ್ಮಭೀರು ಎಂದರೆ ಧರ್ಮಕ್ಕೆ ಅಂಜುವವರು. ಧರ್ಮವನ್ನು ಮಾರಾಟಕ್ಕಿಟ್ಟವರಲ್ಲ, ಧರ್ಮದ ಬಗ್ಗೆ ಬೆಲೆಯಿಲ್ಲದವರಲ್ಲ.

## ಕಬ್ಬಿಣದ ದಾನ

ಸಾಡೇಸಾತಿಯ ತೀವ್ರತೆಯನ್ನು ಕಡಿಮೆ ಮಾಡಿಕೊಳ್ಳುವ ಮತ್ತೊಂದು ಶ್ರೇಷ್ಠ ಸಾಧನ ಕಬ್ಬಿಣವನ್ನು ದಾನ ಮಾಡುವದು. ಎಳ್ಳು ಮತ್ತು ಎಳ್ಳೆಣ್ಣೆಯನ್ನು ದಾನ ಮಾಡುವದು.

ಕಾರಣ, ಕಬ್ಬಿಣ, ಎಳ್ಳು, ಎಳ್ಳೆಣ್ಣೆಗಳು ಶನೈಶ್ಚರರಿಂದ ನಿಯಂತ್ರಣಕ್ಕೆ ಒಳಗಾದ, ಅವರಿಗೆ ಪ್ರಿಯವಾದ ಪದಾರ್ಥಗಳು.

ಆದರೆ ಬಹಳ ದೊಡ್ಡ ಸಮಸ್ಯೆ ಎಂದರೆ ಯಾರೂ ಕಬ್ಬಿಣವನ್ನು ದಾನ ತೆಗೆದುಕೊಳ್ಳುವದಿಲ್ಲ. ಎಲ್ಲರೂ ಅಂಜುತ್ತಾರೆ.

ಕಾರಣ ಯಾವುದೇ ಪದಾರ್ಥವನ್ನು ದಾನ ನೀಡುವದು ಎಂದರೆ ನಮ್ಮ ಪಾಪವನ್ನು ಅವರಿಗೆ ನೀಡುವದು ಎಂದೇ ಅರ್ಥ. ನೀವು ಒಂದು ರೂಪಾಯಿ ದಾನ ಮಾಡಿ, ಕೋಟಿ ರೂಪಾಯಿ ದಾನ ಮಾಡಿ,  ಹಾಸಿಗೆ, ಅಕ್ಕಿ ಬೇಳೆ, ವಸ್ತ್ರ, ಏನನ್ನೇ ದಾನ ಮಾಡಿ, ಅದು ನಿಮ್ಮ ಪಾಪವನ್ನು ಆ ಬ್ರಾಹ್ಮಣರಿಗೆ ನೀಡುವದು ಎಂದರ್ಥ.

ದಾನ ತೆಗೆದುಕೊಳ್ಳುವ ವ್ಯಕ್ತಿ, ಸ್ವೀಕರಿಸಿದ ದಾನಕ್ಕೆ ತಕ್ಕಂತೆ ಜಪವನ್ನು ಮಾಡಬೇಕು, ಮಹತ್ತರ ತಪಸ್ಸನ್ನು  ಮಾಡಬೇಕು. ಕಂಡಕಂಡಲ್ಲಿ ಕಂಡಕಂಡವರಿಂದ ದಾನ ತೆಗೆದುಕೊಂಡು, ಅದಕ್ಕೆ ತಕ್ಕಂತೆ ಜಪ, ತಪಸ್ಸನ್ನು ಮಾಡದ ಬ್ರಾಹ್ಮಣ ತುಂಬ ನೋವಿಗೆ ಒಳಗಾಗುತ್ತಾನೆ.  ವಿಪರೀತ ಕಷ್ಟ ಅನುಭವಿಸುತ್ತಾನೆ. ಹೀಗಾಗಿ ದಾನ ತೆಗೆದುಕೊಳ್ಳುವದು ಸಾಮಾನ್ಯದ ಮಾತಲ್ಲ.

ಇನ್ನು ನೀವು ನೀಡಿದ ದಾನಕ್ಕೆ ತಕ್ಕಂತೆ ಅವನಲ್ಲಿ ತಪಸ್ಸಿಲ್ಲ ಎಂತಾದಲ್ಲಿ ನಿಮಗೂ ಫಲ ದೊರೆಯುವದಿಲ್ಲ.

ಇನ್ನು ಕಬ್ಬಿಣದ ದಾನವಂತೂ ಸಾಡೇಸಾತಿಯ ಕಷ್ಟಗಳ ದಾನವೇ. ಹೀಗಾಗಿ ನೂರರಲ್ಲಿ ತೊಂಬತ್ತೆಂಟು ಜನ ಕಬ್ಬಿಣದ ದಾನವನ್ನು ಸ್ವೀಕರಿಸಲು ಭಯಬೀಳುತ್ತಾರೆ.

ಯಾರಿಗೆ ನೀವು ನೀಡುವ ಕಬ್ಬಿಣವನ್ನು ತೆಗೆದುಕೊಂಡು ಸತ್ಕಾರ್ಯಕ್ಕೆ ಉಪಯೋಗಿಸಿ ನಿಮ್ಮ ತಾಪವನ್ನು ಪರಿಹಾರ ಮಾಡುವ

ಸಾಮರ್ಥ್ಯವಿದೆಯೋ ಅಂತಹವರು ನಿಮಗೆ ದೊರೆತರೆ ನಿಮ್ಮ ಪೂರ್ವಜನ್ಮದ ಸುಕೃತ.

ಇಂತಹವರು ದೊರೆತಾಗ ಯಾವ ರೀತಿ ದಾನ ಮಾಡಬಹುದು ಎನ್ನುವದನ್ನೂ ತಿಳಿಯೋಣ.

ಮನೆ ಕಟ್ಟಲು ಉಪಯೋಗಿಸುವ ಕಬ್ಬಿಣದ ಸಲಾಕೆಗಳ ದಾನ ಶ್ರೇಷ್ಠಮಟ್ಟದ್ದು. ಕಾರಣ ಅದು ಶಾಶ್ವತವಾಗಿ ಇರುತ್ತದೆ.

ಉತ್ತಮರಾದ ಬ್ರಾಹ್ಮಣರು ಮನೆ ಕಟ್ಟುತ್ತಿದ್ದಲ್ಲಿ ನಿಮಗೆ ಶಕ್ಯವಿರುವಷ್ಟು ಕಬ್ಬಿಣವನ್ನು ಅವರಿಗೆ ಕೊಡಿಸಿ.

ಆ ಮನೆಯಲ್ಲಿ ಅವರು ವಾಸ ಮಾಡುವದರಿಂದ, ಅಲ್ಲಿ ನಡೆಯುವ ದೇವರ ಪೂಜೆ, ಅತಿಥಿ ಪೂಜೆಗಳಿಂದ ಅವಶ್ಯವಾಗಿ ಸಾಡೇಸಾತಿಯ ಪರಿಹಾರವಾಗುತ್ತದೆ.

ಬಾವಿಯಿಂದ, ಬೋರ್ವೆಲ್ಲುಗಳಿಂದ ನೀರೆತ್ತುವ ಪಂಪುಗಳನ್ನು ಕಬ್ಬಿಣದಿಂದಲೇ ಮಾಡಿರುತ್ತಾರೆ.

ಅಂತಹ ಮೋಟಾರುಗಳನ್ನು ದಾನ ಮಾಡಬಹುದು.

ಆ ಬೋರ್ವೆಲ್ಲುಗಳಿಗೆ ಹಾಕುವ ಕೇಸಿಂಗ್ ಪೈಪುಗಳೂ ಸಹ ಕೆಲವು ಬಾರಿ ಕಬ್ಬಿಣದ್ದಾಗಿರುತ್ತದೆ. ಅಂತಹವನ್ನೂ ದಾನ ಮಾಡಬಹುದು.

ಇವತ್ತಿನ ದಿವಸ ಓಡಾಡಲು ಪ್ರತಿಯೊಬ್ಬರಿಗೂ ವಾಹನದ ಆವಶ್ಯಕತೆಯಿರುತ್ತದೆ. ಆ ರೀತಿಯ ವಾಹನವಿಲ್ಲದೇ ಬಳಲುತ್ತಿರುವ ಸಜ್ಜನರಿಗೆ ಒಂದು ವಾಹನವನ್ನು ಕೊಡಿಸಿ. **ಮತ್ತೆ ಹೇಳುತ್ತೇನೆ, ನಿಮ್ಮ ಶಕ್ತಿಯನ್ನು ಸರ್ವಥಾ ಮೀರಬೇಡಿ. ಸಾಲ ಮಾಡಿ ದಾನ ಮಾಡು ಎಂದು ಯಾವ ಧರ್ಮಶಾಸ್ತ್ರವೂ ಹೇಳಿಲ್ಲ. ದಾನದ ವಿಷಯದಲ್ಲಿ ಎಲ್ಲ ಋಷಿಮುನಿಗಳೂ ಒಕ್ಕೊರಲಿನಿಂದ ಹೇಳಿರುವ ಮಾತು — ಯಥಾಶಕ್ತಿ ದಾನ ಎಂದೇ. ದೇವರು ನಮಗೆಷ್ಟು ಶಕ್ತಿ ನೀಡಿದ್ದಾನೆಯೋ ಅದಕ್ಕೆ ತಕ್ಕಂತೆ ದಾನ ಎಂದು.** ವಾಹನಗಳನ್ನು ದಾನ ಮಾಡುವ ಶಕ್ತಿಯನ್ನು ಕೆಲವರಿಗೆ ನೀಡಿರುತ್ತಾನೆ, ಸ್ವಾಮಿ.

ಅಂತಹವರಿಗಾಗಿ ಈ ಮಾರ್ಗದ ಸೂಚನೆಯನ್ನು ಮಾಡಿದ್ದಷ್ಟೇ.

ಹೀಗೆ ಕಬ್ಬಿಣದಿಂದ ನಿರ್ಮಾಣವಾದ ಯಾವುದೇ ರೀತಿಯ ಪದಾರ್ಥಗಳನ್ನು ನೀವು ನೀಡಬಹುದು.

ಈ ದಾನವನ್ನು ನೇರವಾಗಿ ಬ್ರಾಹ್ಮಣರಿಗೇ ಮಾಡುವದು ಉತ್ತಮ ಪಕ್ಷ.

ಸಾಧ್ಯವಿಲ್ಲದಿದ್ದಲ್ಲಿ ದೇವಸ್ಥಾನ ಮಠಗಳಿಗೆ ಮಾಡತಬಹುದು. ಆದರೆ ಆ ದೇವಸ್ಥಾನಗಳು, ಮಠಗಳು ಶಾಸ್ತ್ರ ತಿಳಿಸಿದ ಕ್ರಮದಲ್ಲಿ ನಡೆಯುತ್ತಿರಬೇಕು.

ತಿನ್ನುವ ಅನ್ನವನ್ನೂ ಮಾರಾಟ ಮಾಡುವ ಕೇಂದ್ರಗಳಾಗಿದ್ದರೆ ಅಂತಹುವನ್ನು ಪೋಷಣೆ ಮಾಡುವದೂ ನಮ್ಮ ಅಪರಾಧವಾಗುತ್ತದೆ. ಅನ್ನದಾನದ ಸಂಸ್ಕೃತಿ ನಮ್ಮ ವೈದಿಕ ಸಂಸ್ಕೃತಿ. ಆ ಮಹತ್ತರ ಧರ್ಮವನ್ನು ಉಳಿಸಬೇಕಾದ ಕೇಂದ್ರಗಳು ಅನ್ನವನ್ನು ಮಾರಾಟ ಮಾಡುವ ಹಂತ ಮುಟ್ಟಿರುವ ಕಲಿಯುಗದ ಮಹತ್ತರ ಪ್ರಭಾವಕ್ಕೆ ಸಾಕ್ಷಿ.

ಹೀಗಾಗಿ ದಾನ ನೀಡಬೇಕಾದರೆ ಈ ಎಚ್ಚರ ತಪ್ಪಬಾರದು.
ಇನ್ನು ದಾನವನ್ನು ಬ್ರಾಹ್ಮಣರಿಗೇ ನೀಡಿದರೂ, ಅಥವಾ ದೇವಸ್ಥಾನ ಮಠಗಳಿಗೇ ನೀಡಿದರೂ ಹಣದ ರೂಪದಲ್ಲಿ ನೀಡತಕ್ಕದ್ದಲ್ಲ. ಪದಾರ್ಥದ ರೂಪದಲ್ಲಿಯೇ ನೀಡತಕ್ಕದ್ದು. ಕೆಲವು ಬಾರಿ ಅವರಿಗೇ ಆ ರೀತಿಯ ಪದಾರ್ಥಗಳನ್ನು ತರುವ ಅನಿವಾರ್ಯತೆ ಇರುತ್ತದೆ, ಅಂತಹ ಸಂದರ್ಭದಲ್ಲಿ ಅವರಿಗೆ ಹಣವನ್ನು ನೀಡಿ ತರಿಸಿ, ನೀವು ಖುದ್ದಾಗಿ ಹೋಗಿ ಸಂಕಲ್ಪ ಪ್ರಾರ್ಥನೆಗಳೊಂದಿಗೆ ಆ ದಾನವನ್ನು ಮಾಡತಕ್ಕದ್ದು.

## ಎಳ್ಳು ಎಳ್ಳೆಣ್ಣೆಯ ದಾನ

ಪ್ರತೀನಿತ್ಯ ಪೂಜೆ ಮಾಡುವ ಬ್ರಾಹ್ಮಣರಿಗೆ ದೀಪಕ್ಕಾಗಿ ಎಳ್ಳೆಣ್ಣೆಯನ್ನು ದಾನ ಮಾಡಿ.

ಈ ಎಳ್ಳೆಣ್ಣೆಯೂ ಈ ಕಲಿಯುಗದ ಈ ನಕಲೀಯುಗದಲ್ಲಿ ಕಲುಷಿತವಾಗಿದೆ. ಪ್ರಾಣಿಗಳ ಕೊಬ್ಬನ್ನು ಈ ಎಣ್ಣೆಯಲ್ಲಿ ಬಳಸಿ ಮಾರುತ್ತಾರೆ. ದೀಪದ ಎಣ್ಣೆಯ ಸ್ಯಾಷೆಗಳ ಮೇಲೆ ಸ್ಪಷ್ಟವಾಗಿ

ಇದನ್ನು ತಿನ್ನಬಾರದು ಎಂದು ಸೂಚನೆ ನೀಡಿರುತ್ತಾರೆ.

ತಿನ್ನಬಾರದ ಎಣ್ಣೆಯನ್ನು ದೇವರಿಗೆ ಹಚ್ಚುವದೆಂತು.

ಅದರ ಬದಲು ಎಳ್ಳೆಣ್ಣೆಯನ್ನು ತಯಾರಿಸುವ ಜನರಿಂದಲೇ ಎಳ್ಳೆಣ್ಣೆಯನ್ನು ಪಡೆದು ದಾನ ಮಾಡಬೇಕು.

ಅಶುದ್ಧ ಪದಾರ್ಥವನ್ನು ದಾನ ಮಾಡಿದರೆ ದುಷ್ಟ ಫಲಗಳೇ ಉಂಟಾಗುತ್ತವೆ ಎನ್ನುವ ಎಚ್ಚರ, ಅಸತ್ ಪದಾರ್ಥಗಳನ್ನು ದಾನ ನೀಡುವದು ತಾಮಸಿಕ ದಾನ ಎಂಬ ಗೀತೆಯ ಸಿದ್ಧಾಂತ ಯಾವಾಗಲೂ ತಲೆಯಲ್ಲಿರಬೇಕು.

## ಎಳ್ಳೆಣ್ಣೆಯ ದೀಪ ಹಚ್ಚಿ

ದೀಪಕ್ಕೆ ಎಳ್ಳೆಣ್ಣೆಯೇ ಶ್ರೇಷ್ಠ. ಶುದ್ಧವಾದ ಎಳ್ಳೆಣ್ಣೆಯಲ್ಲಿಯೇ ದೇವರಿಗೆ ದೀಪವನ್ನು ಹಚ್ಚಿ. ತುಪ್ಪ, ಎಳ್ಳೆಣ್ಣೆಗಳನ್ನು ಮಿಶ್ರಣ ಮಾಡಿ ಹಚ್ಚಬಾರದು. ಪ್ರತ್ಯೇಕ ಹಚ್ಚಬೇಕು.

## ಗೋಗ್ರಾಸ

ಗೋವುಗಳಿಗೆ ಹುಲ್ಲು, ಆಹಾರ, ನೀರಿನ ವ್ಯವಸ್ಥೆ ಮಾಡಿದಲ್ಲಿ ಸಮಸ್ತ ಕಷ್ಟಗಳೂ ದೂರವಾಗುತ್ತವೆ.

ನಿಮ್ಮ ಮನೆಯ ಬಳಿ ಬರುವ ಹಸುಗಳಿಗೆ ಉತ್ತಮ ಆಹಾರವನ್ನು ನೀಡಿ.

ಉತ್ತಮ ರೀತಿಯಲ್ಲಿ ಗೋವುಗಳನ್ನು ಸಾಕುತ್ತಿರುವ ಸಜ್ಜನರಿಗೆ ಸಹಾಯ ಮಾಡಿ.

ಹುಲ್ಲು, ಹಿಂಡಿ, ಬೂಸಾ, ನೀರು ಮುಂತಾದವುಗಳಿಗೆ ವ್ಯವಸ್ಥೆ ಮಾಡಿಕೊಡಿ.

ದೇವರು ಶಕ್ತಿ ನೀಡಿದ್ದರೆ ಬೋರ್ವೆಲ್ಲು ಮುಂತಾದವಗಳನ್ನು ತೋಡಿಸಿ ಶಾಶ್ವತ ವ್ಯವಸ್ಥೆ ಮಾಡಿ.

ಗೋವುಗಳು ಹೊಟ್ಟೆ ತುಂಬ ಉಂಡು, ಎಲ್ಲಿ ನೆಮ್ಮದಿಯಿಂದ ಮಲಗುತ್ತವೆಯೋ ಆ ಮನೆಯಲ್ಲಿ ಎಂದಿಗೂ ಅಶಾಂತಿ ಇರುವದಿಲ್ಲ. ಮೈಲಿಗೆ ಇರುವದಿಲ್ಲ. ಸಮಸ್ಯೆಗಳೆಲ್ಲ ಪರಿಹಾರವಾಗುತ್ತವೆ.

## ಗುರುಗಳ ಸೇವೆ, ರಾಯರ ಸೇವೆ

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು **"ಸಮಸ್ತದುಷ್ಟಗ್ರಹನಿಗ್ರಹೇಶರು"** ಎಂದೇ ಪ್ರಸಿದ್ಧರು. ದುಷ್ಟಗ್ರಹ ಎಂದರೆ ದುಷ್ಟಸ್ಥಾನ-ದಲ್ಲಿರುವ ಗ್ರಹ.

ಯಾವುದೇ ಗ್ರಹ ಜಾತಕದಲ್ಲಿ ದುಷ್ಟಸ್ಥಾನದಲ್ಲಿದ್ದು ದುಷ್ಟಫಲಗಳನ್ನು ನೀಡುತ್ತಿದ್ದರೆ ಆ ಬಾಧೆಯನ್ನು ನಿಗ್ರಹಿಸಿ ಅನುಗ್ರಹ ಮಾಡುವ ಸಾಮರ್ಥ್ಯ ಶ್ರೀಮನ್ ಮಂತ್ರಾಲಯಪ್ರಭುಗಳಿಗಿದೆ.

ಆ ಗುರುರಾಜರ ಸೇವೆಯಿಂದ ನಿಶ್ಚಿತವಾಗಿ ಸಾಡೇಸಾತಿಯ ಪರಿಣಾಮಗಳಿಂದ ಪಾರಾಗಬಹದು.

ಹಾಗೆಯೇ ಪರಮಮಂಗಳರಾದ ಶ್ರೀಮದ್ವಾದಿರಾಜಗುರುಸಾರ್ವಭೌಮರು, ಶ್ರೀಮಚ್ಚಂದ್ರಿಕಾಚಾರ್ಯರು, ಶ್ರೀ ಶ್ರೀಪಾದರಾಜರು, ಶ್ರೀ ಬ್ರಹ್ಮಣ್ಯತೀರ್ಥರು, ಶ್ರೀಮಟ್ಟೀಕಾಕೃತ್ಪಾದರು, ಶ್ರೀ ಪದ್ಮನಾಭತೀರ್ಥರು, ಶ್ರೀಮದಾಚಾರ್ಯರು ಈ ಎಲ್ಲ ಗುರುಗಳ ಸನ್ನಿಧಾನಕ್ಕೆ ಹೋಗಿ ಸೇವೆ

ಮಾಡುವದರಿಂದ ಸಮಸ್ತ ದುರಿತಗಳೂ ನೀಗುತ್ತವೆ. ಸಕಲ ಕಷ್ಟಗಳಿಂದಲೂ ಪಾರಾಗುತ್ತೇವೆ.

ಆ ಕ್ಷೇತ್ರಗಳಿಗೆ ಹೋಗಿ ಸೇವೆ ಮಾಡಲು ಸಾಧ್ಯವಿಲ್ಲದಿದ್ದರೂ ಅವರ ಮೃತ್ತಿಕೆಯನ್ನು, ಗ್ರಂಥಗಳನ್ನು ಮಣೆಯ ಮೇಲಿಟ್ಟು ದೀಪ ಹಚ್ಚಿ ನಮಸ್ಕಾರಗಳನ್ನು ಮಾಡುವದರಿಂದ ಸಾಡೇಸಾತಿಯ ಪರಿಣಾಮ ದೂರಾಗುತ್ತದೆ.

ಪ್ರತೀನಿತ್ಯವೂ ಕನಿಷ್ಠ 21 ನಮಸ್ಕಾರಗಳನ್ನು ಹಾಕುವ ಪದ್ಧತಿಯನ್ನಿಟ್ಟುಕೊಳ್ಳಬೇಕು.

ಗುರುಗಳ ಸ್ತೋತ್ರವನ್ನು ಪಠಿಸಬೇಕು.

## ಪ್ರಾಣದೇವರ ಸ್ತೋತ್ರ ಸೇವೆ

ನಮ್ಮ ಕಷ್ಟಗಳಿಗೆ ರಾಮಬಾಣ ಎಂದರೆ ವಾಯುಸ್ತುತಿ, ಮಧ್ವನಾಮ, ಯಂತ್ರೋ-ದ್ಧಾರಕಸ್ತೋತ್ರಗಳು.

ಪ್ರತೀನಿತ್ಯ ವಾಯುಸ್ತುತಿಯ ಪಾರಾಯಣ, ತಿಂಗಳಿಗೊಮ್ಮೆಯಾದರೂ ಅದರ ಪುರಶ್ಚರಣವನ್ನು ಮಾಡತಕ್ಕದ್ದು.

ಶ್ರೀಪ್ರಾಣದೇವರ ಜಾಗೃತಸನ್ನಿಧಾನವಿರುವ ನೂರಾರು ಕ್ಷೇತ್ರಗಳು ಇಂದಿಗೂ ಇವೆ. ಅಲ್ಲಿಗೆ ಹೋಗಿ ಸೇವೆ ಮಾಡತಕ್ಕದ್ದು.

## ನರಸಿಂಹದೇವರ ಸ್ತೋತ್ರ

ಸಾಡೇಸಾತಿಯ ಸಮಸ್ತ ಪರಿಣಾಮಗಳಿಂದಲೂ ದೂರಾಗಲು ಇರುವ ಸರ್ವೋತ್ತಮ ಉಪಾಯ ಶ್ರೀನರಸಿಂಹದೇವರ ಸ್ತೋತ್ರ ಮತ್ತು ಸೇವೆ.

ಶನೈಶ್ಚರರು ನರಸಿಂಹದೇವರನ್ನು ಉಪಾಸನೆ ಮಾಡಿ ಸಾಕ್ಷಾತ್ಕಾರವನ್ನು ಪಡೆದು ಸ್ತೋತ್ರ ಮಾಡುತ್ತಾರೆ. ಹದಿನಾಲ್ಕು ಪದ್ಯಗಳ ರಮಣೀಯ ಸ್ತೋತ್ರ.

ಈ ಸ್ತೋತ್ರದಿಂದ ಸಂತುಷ್ಟರಾದ ಶ್ರೀನರಸಿಂಹದೇವರು ಶನೈಶ್ಚರರಿಗೆ ವರವನ್ನು ನೀಡಿ ಶಾಸನ ಮಾಡುತ್ತಾರೆ —

**ತ್ವತ್ಕೃತಂ ಮತ್ಪರಂ ಸ್ತೋತ್ರಂ**
**ಯಃ ಪಠೇತ್-ಶೃಣುಯಾಚ್ಚ ಯಃ ।**
**ದ್ವಾದಶಾಷ್ಟಮಜನ್ಮಸ್ಥ-**
**ತ್ವದ್ಭಯಂ ಮಾಸ್ತು ತಸ್ಯ ವೈ ।।**

“ಶನೇ, ನೀನು ಮಾಡಿರುವ ಈ ನನ್ನ ಸ್ತೋತ್ರವನ್ನು ಯಾರು ಪಠಣ ಮಾಡುತ್ತಾರೆಯೋ, ಅಥವಾ ಪಠಣ ಮಾಡುವದನ್ನು ಯಾರು ಕೇಳುತ್ತಾರೆಯೋ ಅವರಿಗೆ ನೀನು ಹನ್ನೆರಡು-ಒಂದು-ಎರಡನೇ ಮನೆಯಲ್ಲಿದ್ದು ಭಯವನ್ನು ನೀಡತಕ್ಕದ್ದಲ್ಲ, ಅಷ್ಟಮದಲ್ಲಿದ್ದು ಭಯವನ್ನು ನೀಡತಕ್ಕದ್ದಲ್ಲ[4]”

ಹೀಗೆ ಸ್ವಯಂ ನರಸಿಂಹದೇವವರ ಅನುಗ್ರಹವನ್ನು ಪಡೆದ ಸ್ತೋತ್ರವಿದೆ.

ಅದನ್ನು ಕಲಿತು ಪಠಣ ಮಾಡಬೇಕು. ಸಮಸ್ತ ದೋಷಗಳೂ ದೂರವಾಗುತ್ತವೆ. ಸಮಸ್ಯೆಗಳು ಪರಿಹಾರವಾಗುತ್ತವೆ.

[4] ಅಷ್ಟಮ ಶನಿಯಿಂದ ಅಪಘಾತಗಳು ಉಂಟಾಗುತ್ತವೆ. ತನಗೆ ಅಥವಾ ತನ್ನವರಿಗೆ ಸಾವಿನ ಭಯವಿರುತ್ತದೆ.

## ಎಷ್ಟು ದಿವಸ ಪರಿಹಾರ ಆಚರಿಸಬೇಕು, ಯಾವಾಗ?

ಸ್ತೋತ್ರ, ಪಾರಾಯಣ ನಮಸ್ಕಾರಗಳನ್ನು ಸಾಡೇಸಾತಿ ಆರಂಭವಾಗುವದಕ್ಕಿಂತ ಮುಂಚೆಯೇ ಆರಂಭಿಸುವದು ಉತ್ತಮ ಪಕ್ಷ. ಆಗ ಆರಂಭದಲ್ಲಿಯೇ ಸಾಡೇಸಾತಿಯ ತೀವ್ರತೆ ಕಡಿಮೆಯಾಗುತ್ತದೆ.

ಸಾಡೇಸಾತ್ ನಡೆಯುವ ಕಾಲದಲ್ಲಂತೂ ಅದನ್ನು ಮಾಡಲೇಬೇಕು.

ಶ್ರೀ ಶನ್ಯೈಶ್ಚರಾಯ ನಮಃ ಎಂಬ ಮಂತ್ರವನ್ನಂತೂ ಇಡಿಯ ಏಳೂವರೆವರ್ಷಗಳ ಕಾಲ ಪಠಿಸಬೇಕು. ತಪ್ಪಿಸಬಾರದು.

ನಿಮ್ಮ ಮನೆಗೆ ಹತ್ತಿರದ ಊರುಗಳಲ್ಲಿರುವ ಶ್ರೀನರಸಿಂಹಕ್ಷೇತ್ರಗಳಿಗೆ, ಪ್ರಾಣದೇವರ ದೇವಸ್ಥಾನಗಳಿಗೆ ನಿಯಮಿತವಾಗಿ ಶನಿವಾರಗಳಂದು (ಪ್ರತೀ ಶನಿವಾರ ಉತ್ತಮ, ಸಾಧ್ಯವಿಲ್ಲದಿದ್ದಲ್ಲಿ, ತಿಂಗಳಿಗೊಂದು

ಶನಿವಾರವಾದರೂ) ಹೋಗಿ ದರ್ಶನ, ನಮಸ್ಕಾರಗಳನ್ನು ಮಾಡಿ ಬರಬೇಕು.

ವರ್ಷಕ್ಕೊಮ್ಮೆಯಾದರೂ ಮಂತ್ರಾಲಯ ಸ್ವಾದಿ ಮುಂತಾದ ಸುಕ್ಷೇತ್ರಗಳಿಗೆ ಹೋಗಿ ಗುರುರಾಜರ ಸೇವೆಯನ್ನು ಮಾಡಿ ಅವರ ಪಾದೋದಕ ಹಸ್ತೋದಕಗಳನ್ನು ಸ್ವೀಕರಿಸಿ ಬರಬೇಕು. ಸಮಸ್ತ ದೇಹದೋಷಗಳಿಗೆ, ಗೃಹದೋಷಗಳಿಗೆ ದಿವ್ಯೌಷದ ಗುರುಪಾದೋದಕ.

ಇನ್ನು ದಾನ ಯಥಾಶಕ್ತಿ. ದೇವರು ನೀಡಿದ್ದರಲ್ಲಿ ಮನಸ್ಸಿಗೆ ಒಪ್ಪಿಗೆಯಾಗುವಷ್ಟು ದಾನವನ್ನು ಮಾಡತಕ್ಕದ್ದು.

ಯಜ್ಞಕ್ಕಿಂತ ದಾನ ಶ್ರೇಷ್ಠ. ದಾನಕ್ಕಿಂತ ತಪಸ್ಸು ಶ್ರೇಷ್ಠ.

ಮಂತ್ರಗಳ ಜಪ, ಮಂತ್ರಾರ್ಥದ ಚಿಂತನೆ, ತೀರ್ಥಯಾತ್ರೆ, (ದೇವಸ್ಥಾನಗಳ ದರ್ಶನ) ನಮಸ್ಕಾರಗಳು ತಪಸ್ಸಿನ ಪರಿಧಿಯಲ್ಲಿಯೇ ಬರುವಂತಹವು.

ಹೀಗಾಗಿ ಎಷ್ಟು ಸಾಧ್ಯವೋ ಅಷ್ಟು ನಮಸ್ಕಾರಗಳನ್ನು ಸಲ್ಲಿಸಬೇಕು. ನಮಸ್ಕಾರ ಪ್ರಾರ್ಥನೆಗಳಿಂದ ಉಂಟಾಗುವಷ್ಟು ಫಲ ಯಾವ ದಾನ, ಯಜ್ಞಗಳಿಂದಲೂ ಉಂಟಾಗುವದಿಲ್ಲ.

ಮನೆಯಲ್ಲಿ ನಿತ್ಯ ವಾಯುಸ್ತುತಿಯ ಪಠಣ ನಡೆಸಿ. ಹೆಣ್ಣುಮಕ್ಕಳು ಮಧ್ವನಾಮದ ಪಠಣವನ್ನು ಮಾಡಿ. ಯಂತ್ರೋದ್ಧಾರಕ ಪ್ರಾಣದೇವರ ಸ್ತೋತ್ರವನ್ನು ಪಠಿಸಿ.

ಭಾಗವತದಲ್ಲಿ ಒಂದು ಅದ್ಭುತವಾದ ಮಾತಿದೆ — ನವೈ ಜನೋ ಜಾತು ಕಥಂಚಾನಾವ್ರಜೇತ್ ಮುಕುಂದಸೇವ್ಯನ್ಯವದಂಗ ಸಂಸೃತಿಮ್ ಎಂದು.

ಅಂದರೆ ಭಗವಂತನ ನಿರಂತರ ಸೇವೆ ಮಾಡುವ ಪ್ರಾಮಾಣಿಕಭಕ್ತರಿಗೆ ಸಂಸಾರದ ತಾಪತ್ರಯಗಳು ಇತರರಿಗೆ ಬಂದಂತೆ ಬರುವದಿಲ್ಲ. ಶ್ರೀಹರಿ ಕಾಪಾಡುತ್ತಾನೆ ಎಂದು.

ಕಷ್ಟ ಬಂದರೂ ಆ ಕಷ್ಟವನ್ನು ಸಾಧನೆಯನ್ನಾಗಿ ಮಾಡಿಕೊಳ್ಳುವ ಸದ್ಬುದ್ಧಿಯನ್ನು ದೇವರು ಅನುಗ್ರಹಿಸುತ್ತಾನೆ.

ಸಕಲಗ್ರಹಬಲ ನೀನೆ ಸರಸಿಜಾಕ್ಷ ಎಂದು ಅವನ ಚರಣಕಮಲಗಳನ್ನು ನಂಬಿದಲ್ಲಿ, ಪ್ರತೀನಿತ್ಯ ಸಾಲಿಗ್ರಾಮದ ಪೂಜೆ, ಶ್ರೀಮಧ್ವಶಾಸ್ತ್ರದ ಶ್ರವಣ ನಡೆಯುತ್ತಿದ್ದಲ್ಲಿ ನಮ್ಮನ್ನು ಕಾಪಾಡುವ ಭಾರವನ್ನು ಸ್ವಯಂ ಭಗವಂತ ವಹಿಸುತ್ತಾನೆ. ಯೋಗಕ್ಷೇಮಂ ವಹಾಮ್ಯಹಮ್.

ಹೀಗಾಗಿ ನಾವು ಪ್ರಾಮಾಣಿಕವಾಗಿ ಮುಕುಂದಸೇವೆಯನ್ನು ಮಾಡಬೇಕು. ಸ್ವಾಮಿ ಕಾಪಾಡುತ್ತಾನೆ.

ಶ್ರೀಹರಿ-ವಾಯು-ದೇವತಾ-ಗುರುಗಳು ನಿಮ್ಮ ಮೇಲೆ ಕಾರುಣ್ಯವನ್ನು ತೋರಲಿ, ನಿಮ್ಮ ಕಷ್ಟಗಳು ಪರಿಹಾರವಾಗಲಿ, ಉತ್ತಮ ಸಾಧನ ಜೀವನ ನಿಮ್ಮದಾಗಲಿ, ಶ್ರೀಹರಿ-ಗುರುಗಳಲ್ಲಿ ನಿರ್ಮಲವಾದ ಭಕ್ತಿಯಿರಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ